ಅವಳ ಮಾತು, ನಡೆ ನುಡಿ, ಗಾಂಭೀರ್ಯ ಅವಳ ಸೌಂದರ್ಯವನ್ನು ಇಮ್ಮಡಿಗೊಳಿಸಿತ್ತು. ಮನೆಯಲ್ಲಿಯೇ ಇದ್ದರೂ ಹೀಗೆ ಡ್ರೆಸ್ ಮಾಡಿಕೊಂಡಿರುತ್ತಾಳೆ ಅಂತ ನಾಗೇಶ್ ಊಹಿಸಿರಲಿಲ್ಲ.

"ನನಗೆ ಚೇತನ್‌ಕುಮಾರ್ ಬಹಳ ವರ್ಷಗಳಿಂದ ಗೊತ್ತು. ಅವರ ಸಿನಿಮಾಗಳಲ್ಲಿ ನಾನು ನಟಿಸಿದ್ದೆ. ನಿನ್ನೆ ಸಾಯಂಕಾಲ ಅವರ ಕೊಲೆಯಾಗಿದೆ. ನಾನು ಅವರನ್ನು ಭೇಟಿಯಾಗುವೆ ಅಂತ ಮೆಸೇಜ್ ಮಾಡಿದ್ದೆ. ಅದರ ಬಗ್ಗೆ ವಿಚಾರಿಸುವುದಕ್ಕೆ ಬಂದಿರುವುದು ತಾನೇ?"

ನಾಗೇಶ್ ಕೊಂಚ ಗಲಿಬಿಲಿಗೊಂಡ.

'ತನಗೇನೂ ತಿಳಿದಿಲ್ಲ ಅನ್ನುತ್ತಾಳೆ, ನಂತರ ಪ್ರೂಫ್ ತೋರಿಸಿದರೆ, ಭಯ ಪಡುತ್ತಾಳೆ... ಲೇಡಿ ಕಾನ್‌ಸ್ಟೆಬಲ್‌ಗಳಿಂದ ಕೊಂಚ ಹೆದರಿಸಿದರೆ ಬಾಯಿ ಬಿಡುತ್ತಾಳೆ' ಎನ್ನುವ ಪೂರ್ವಾಲೋಚನೆಯಿಂದ ಬಂದಿದ್ದ ನಾಗೇಶ್. ಅವನು ಸಿದ್ಧಪಡಿಸಿಕೊಂಡು ಬಂದಿದ್ದ ಪ್ರಶ್ನಾವಳಿಯನ್ನು ಹೊರ ತೆಗೆಯಲು ನವಮಿಯ ಗಂಭೀರ ಮಾತುಗಳು ಬಿಡಲಿಲ್ಲ. ಕೊಂಚ ಸಾವರಿಸಿಕೊಂಡು,

"ಹೌದು, ಅದಕ್ಕೇ ಬಂದಿರೋದು. ನೀವು ನಮಗೆ ನಿಜ ಹೇಳುತ್ತೀರಿ ಅಂತ ನಂಬಿದ್ದೇನೆ. ನೀವು ನಿನ್ನೆ ಚೇತನ್‌ಕುಮಾರ್‌ರನ್ನು ಭೇಟಿ ಮಾಡಲು ಹೋಗಿದ್ದಿರಾ?"

"ಇಲ್ಲ, ನನಗೆ ಬೇರೊಂದು ಅರ್ಜೆಂಟ್ ಕೆಲಸ ಬಂದಿದ್ದುದರಿಂದ ಹೋಗಲಿಲ್ಲ. ಆ ವಿಷಯ ಅವರಿಗೆ ತಿಳಿಸಲೂ ಆಗಲಿಲ್ಲ."

'ಎಲ್ಲಿಗೆ ಹೋಗಿದ್ದಿರಿ?' ಎನ್ನುವ ಪ್ರಶ್ನೆ ಬಾಯಿಯ ತನಕ ಬಂದರೂ ನವಮಿ, ಬಹಳ ಬುದ್ಧಿವಂತಿಕೆಯಿಂದ ಉತ್ತರಿಸುತ್ತಿದ್ದಾಳೆ ಎಂದು ಅರಿತು, ತನ್ನ ಪ್ರಶ್ನೆ ಬದಲಾಯಿಸಿದ.

"ನೀವು ಬರುತ್ತೀರಿ ಅಂತಾ ಕಾಯುತ್ತಿದ್ದರು... ಆದರೆ ಅವರ ಸಾವು ಅವರನ್ನು ಭೇಟಿ ಮಾಡಿತು."

ಅವನ ಮಾತುಗಳಿಗೆ ನವಮಿ ಯಾವ ಭಾವನೆಯನ್ನೂ ವ್ಯಕ್ತಪಡಿಸಲಿಲ್ಲ.

"ಹೇಗೆ ನಿಮ್ಮ ಫ್ರೆಂಡ್ ಚೇತನ್‌ಕುಮಾರ್?"

ಕೊಂಚ ವ್ಯಂಗ್ಯವಾದ ದನಿಯಲ್ಲಿ ಕೇಳಿದ ನಾಗೇಶ್. ಅವನಿಗೆ ನವಮಿಯ ಗಾಂಭೀರ್ಯವನ್ನು ಮುರಿಯಬೇಕಿತ್ತು. ಅವಳ ಎಮೋಷನಲ್ ಸ್ಟೆಬಿಲಿಟಿಯನ್ನು ಮುರಿಯಬೇಕಿತ್ತು.

"ಹೇಗೆ ಅಂದರೆ? ಎಲ್ಲಾ ಗಂಡಸರಂತೆಯೇ... ಮೇಲಾಗಿ ಸಿನಿಮಾ ಪ್ರೊಡ್ಯೂಸರ್... ತೆಗೆಯುತ್ತಿದ್ದಿದ್ದೂ ಕೊಂಚ ಹಸಿ ಬಿಸಿ ದೃಶ್ಯ ಇರುವ ಸಿನಿಮಾಗಳು. ಸೋ... ಹೆಣ್ಣಾಗಿ ನಾನೇ ಎಲ್ಲಾ ವಿವರಿಸಿ ಹೇಳಬೇಕಾ ಅಥವಾ ನೀವೇ ಅರ್ಥಮಾಡಿಕೊಳ್ಳುವಿರಾ?"

'ಪ್ರಶ್ನೆಗೆ ಉತ್ತರ ನೀಡುತ್ತಿಲ್ಲ. ಬದಲಿಗೆ ಉತ್ತರವನ್ನು ನಾನೇ ಕಂಡುಕೊಳ್ಳಲು ತಳ್ಳುತ್ತಿದ್ದಾಳೆ!'

"ನೀವು ಅವರನ್ನು ಭೇಟಿ ಮಾಡಬೇಕಿಂದಿದ್ದ ಉದ್ದೇಶ?"

"ತನ್ನ ಮುಂದಿನ ಸಿನಿಮಾದಲ್ಲಿ ಒಂದು ರೋಲ್ ಇದೆ ಮಾಡುತ್ತಿಯಾ ಅಂತ ಕೇಳಿದ್ದ, ಅದಕ್ಕೇ."

ಅದೇ ಗಂಭೀರ ನುಡಿ, ಕ್ಲುಪ್ತ ಉತ್ತರ.

"ಅವರು ಸರಿಯಿಲ್ಲ ಅಂತ ತಿಳಿದೂ ಅವರ ಜೊತೆನೇ ಸಿನಿಮಾನಾ? ಸಿನಿಮಾ ಬಗ್ಗೆ ಅಷ್ಟೊಂದು ಆಸಕ್ತಿಯಾ?" ನಾಗೇಶ್ ಮತ್ತೆ ವ್ಯಂಗ್ಯದ ಬಾಣ ಎಸೆದ.

"ಹಾಗೇನಿಲ್ಲ. ನನಗೆ ಇನ್ನು ಕೆಲವು ದಿನಗಳಲ್ಲಿ ಡೈವೋರ್ಸ್ ಆಗಲಿದೆ. ಆಮೇಲೆ ಮಗಳನ್ನು ಸಾಕುವ ಹೊಣೆ ನನ್ನದೇ. ನನಗೆ ತಿಳಿದಿರುವುದು ಇದೊಂದೇ ವೃತ್ತಿ. ಮತ್ತೆ ಸಿನಿಮಾ ಕೆರಿಯರ್ ಪ್ರಾರಂಭಿಸೋಣ ಅಂತ ಅವರನ್ನು ಭೇಟಿಯಾಗಿದ್ದೆ."

ತನ್ನ ಯಾವುದೇ ಟ್ರಿಕ್‌ಗಳಿಗೂ ಬಗ್ಗುತ್ತಿಲ್ಲ ಎಂದು ಅರಿತ ನಾಗೇಶ್ ನೇರವಾಗಿ ಪ್ರಶ್ನಿಸಿದ.

"ಅದೇನೋ ಬೇರೆ ಕೆಲಸ ಬಂದಿತ್ತು ಅಂದಿರಲ್ಲ ಅದೆಲ್ಲಿಗೆ ಹೋಗಿದ್ದಿರಿ, ಎಷ್ಟು ಹೊತ್ತಿಗೆ ಹೋದಿರಿ? ಎಷ್ಟು ಹೊತ್ತಿಗೆ ವಾಪಸ್ ಬಂದಿರಿ?"